ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ 2002

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ-2002ವನ್ನು ಪರ್ಯಾಲೋಚಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು)

ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ

ಅಧ್ಯಕ್ಷರು: "ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದನೆಯ ಖಂಡ ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ-2002ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ-2002ನ್ನು ಅಂಗೀಕರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ii. ಕರ್ನಾಟಕ ಸರ್ಕಾರಿ ಮೇಲಿನ ಮಿತಿ (ತಿದ್ದುಪಡಿ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿಬಿ..ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ): ಅಧ್ಯಕ್ಷರೇ "2002ರ ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ (ತಿದ್ದುಪಡಿ) ವಿಧೇಯಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ. ಪಿಜಿಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೇ ಇದು ಬೆಟ್ಟ ಅಗೆದು ಇಲಿ ಹಿಡಿದ ಹಾಗಾಗಿದೆ. ಬಡ್ಡಿ ಮನ್ನಾ ಮಾಡಬೇಕು ಎಂದು ನಾವು ಎರಡೂವರೆ ವರ್ಷಗಳಿಂದ ಹೇಳಿಕೊಂಡು ಬಂದೆವು. ಆದೇನೋ ಕಾಂಗ್ರೆಸಿನವರು ಅಧಿಕಾರಕ್ಕೆ ಬಂದರೆ ಬಡ್ಡಿ ಮನ್ನಾ ಮಾಡುವುದಕ್ಕೆ ಅವರಿಗೆ ಅಮರ್ಷನ್, ಮೊದಲ ಬಾರಿಗೆ ನಾನು ಮುಖ್ಯಮಂತ್ರಿಯವರನ್ನು ಕೇಳಿದ್ದು, ಪ್ರಧಾನಮಂತ್ರಿಗಳ ಜೊತೆ ನಾನು ಡೈಲಾಗ್ ಮಾಡಿದೆ, ಅದರ ಬಗ್ಗೆ ಕನ್‌ಸಿಡರ್

ಮಾಡುತ್ತೇವೆಂದು ಹೇಳಿದ್ದಾರೆ. perhaps you are the first congress chief minister in the recent past, 20 ವರ್ಷಗಳಿಂದ ಈ ಬಡ್ಡಿ ಮನ್ನಾ ಬಗ್ಗೆ ಮಾತನಾಡಿರುವುದು. ನಮ್ಮ ಕನಕಪುರ, ಮಂಡ್ಯದವರೆಲ್ಲಾ ಒಂದು ಗಾದೆ ಹೇಳುತ್ತೇವೆ ಬಂದಿದ್ದೇ ಬರ್ನಳ್ಳಿ ಸುಂಕ ಅಂತ ಹೇಳಿ ಸಂತೆಗೆ ಹೋದವರು ಹಾಗೆ ಖಾತರಿ ಕೊಟ್ಟಿದ್ದ ಕಮಿಷನ್ 3.69 ಕೋಟಿ ರೂ. ಅಂದರೆ ಸುಮಾರು 4 ಕೋಟಿ ರೂ. ಅಷ್ಟು ಸಿಕ್ಕಿದಹಾಗೆ ಹಾಗಿದೆ. ಅಷ್ಟರ ಮಟ್ಟಿಗೆ ಇದನ್ನು ಸ್ವಾಗತ ಮಾಡುತ್ತೇವೆ. There is nothing to oppose in this.

ಶ್ರೀ. ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಈ ರಿಯಾಯ್ತಿ ಬಗ್ಗೆ ಇನ್ನೂ ಬ್ರಾಡ್ ಆಗಿ ವಿಚಾರ ಮಾಡಬೇಕು. ಈಗಾಗಲೇ ಬಡ್ಡಿ ಮನ್ನಾ ಬಗ್ಗೆ ನಾವು ಪ್ರತಿ ಸಲವು ಇನ್‌ಸಿಸ್ಟ್ ಮಾಡುತ್ತಾ ಬಂದಿದ್ದೇವೆ. ಕೇಂದ್ರ ಸರ್ಕಾರದವರು ಏನೋ ನಿರ್ಣಯ ಕೈಗೊಳ್ಳುತ್ತಾರೆ ಎಂದು ಹೇಳಿದಿರಿ. ಅವರು ತಿಳಿಸುತ್ತೇವೆ ಎಂದು ಹೇಳಿದ್ದಾರೆ ಅಂದಿರಿ, ನಿಮ್ಮಿಂದ ಒಂದು ಸಲ ಬಡ್ಡಿ ಮನ್ನಾ ಮಾಡುವುದು ಆಗಲಿ. ಕಳೆದ ಮೂರು ವರ್ಷಗಳಿಂದ ಬರಗಾಲದ ಪರಿಸ್ಥಿತಿ ಇದೆ ದಯವಿಟ್ಟು ಒಂದು ಸಲ ಎನ್‌ಮಾಸಾಗಿ ಬಡ್ಡಿ ಮನ್ನಾ ಮಾಡಿದರೆ ರೈತರಿಗೆ ಅನುಕೂಲವಾಗುವುದು.

ಶ್ರೀ. ಕೆ.ಜಯಪ್ರಕಾಶ್ ಹೆಗಡೇ (ಬ್ರಹ್ಮಾವರ): ನಾನು ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಇದು First day of April 2001 to 31st day of April 2002 ಎಂದು ಇದರಲ್ಲಿ ಹೇಳಿದ್ದಾರೆ ಕೇವಲ ಈ ಒಂದು ವರ್ಷಕ್ಕೋ ಅಥವಾ ಮುಂದುವರಿಸುವರೋ ಅನ್ನುವುದು ಬೇಕು. ನಾಲ್ಕು ಕೋಟಿ ರೂ. ಏನು ಕೊಟ್ಟಿದ್ದಾರೆ ನಾವೂ ಸಹ ಇದರ ಫಲಾನುಭವಿಗಳು. ಆದ್ದರಿಂದ ಇದನ್ನು ಮುಂದುವರಿಸುತ್ತಾರೋ ಹೇಗೋ ಎಂಬುದನ್ನು ಹೇಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ : ಇದೆಂದರೆ, ಅಪೆಕ್ಸ್ ಸಂಸ್ಥೆಗಳು ರೈತರಿಗೆ ಏನು ಸಾಲ ಕೊಡುತ್ತಿವೆ ಅದಕ್ಕೆ ಸರ್ಕಾರ ಖಾತರಿ ಕೊಡುತ್ತದೆ. ಆ ಖಾತರಿಗೆ ಒಂದು ಪರ್ಸೆಂಟ್ ಕಮಿಷನ್ ಸರ್ಕಾರಕ್ಕೆ ಹಾಕುತ್ತದೆ. ನಾವು ಈಗ ಆ ಕಮಿಷನ್ ಬೇಡಪ್ಪ, ಅದನ್ನು ಕೈಬಿಟ್ಟಿದ್ದೇವೆ, ಆ ಲಾಭ ರೈತರಿಗೇ ಹೋಗಲಿ ಎಂದು ಹೇಳಿದ್ದೇವೆ. ಅದಕ್ಕಾಗಿ ಈ ಬಿಲ್ ಅಷ್ಟೇ

ಶ್ರೀ. ಎಸ್. ಎಸ್. ಪಾಟೀಲ್ (ಮುಂಡರಗಿ): ಇದು ಒಂದು ವರ್ಷಕ್ಕೆ ಮಾಡುತ್ತಿರುವಿರೋ ಅಥವಾ ಶಾಶ್ವತವಾಗಿ ಮಾಡುತ್ತಿರುವಿರೋ? ಏಕೆಂದರೆ ಕಮಿಷನ್ ಸರ್ಕಾರ ತೆಗೆದುಕೊಂಡಿದ್ದೇ ತಪ್ಪು, ಅದೇ ರೀತಿ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲೂ ತೆಗೆದುಕೊಳ್ಳುತ್ತಾ ಇದ್ದೀರಿ. ಅದನ್ನು ಇದರಲ್ಲಿ ಸೇರಿಸಿಲ್ಲ. ಅವಕ್ಕೂ ತರಬೇಕು, ಯಾವುದೇ ಸಹಕಾರಿ ಸಂಸ್ಥೆಗೆ ನೀವು ಗ್ಯಾರಂಟಿ ಕೊಡುವಾಗ ಕಮಿಷನ್ ತೆಗೆದುಕೊಳ್ಳಬಾರದು. ಆ ರೀತಿ ಇದರಲ್ಲಿ ದಯವಿಟ್ಟು ತಿದ್ದುಪಡಿ ತನ್ನಿರಿ.

ಶ್ರೀ ಡಿ.ಬಿ.ಚಂದ್ರೇಗೌಡ : ಈಗಿರುವ ತಿದ್ದುಪಡಿ ಪಾಸ್ ಮಾಡಿಕೊಡಿ. ತಮ್ಮ ಸಲಹೆಯನ್ನು ಆಲೋಚನೆ ಮಾಡುತ್ತೇವೆ.

ಶ್ರೀ. ಬಿ.ಹೆಚ್.ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಮುಖ್ಯಮಂತ್ರಿಗಳು ಹಿಂದಿನ ವಿಧಾನಸಭೆಯಲ್ಲಿ ಹೇಳಿದ್ದರು. ಸರ್ಕಾರ ಗ್ಯಾರಂಟಿ ಸಲುವಾಗಿ ಒಂದು ಪರ್ಸೆಂಟ್ ಏನು ತೆಗೆದುಕೊಳ್ಳುತ್ತ ಇದ್ದೀವಿ ಅದನ್ನು ಕೈಬಿಡುತ್ತೇವೆ ಅಂತ. ಅದರಜೊತೆಗೆ ಬಜೆಟ್ ಭಾಷಣದಲ್ಲಿ ಹೇಳಿದ್ದರು. ರೈತರಿಗೇನು ಸಾಲ ಕೊಟ್ಟಿದ್ದೇವೆ ಅದರ ಮೇಲಿನ ಬಡ್ಡಿ ಕಡಿಮೆ ಮಾಡುವುದೂ ಸರ್ಕಾರದ ಉದ್ದೇಶ ಅಂತ. ಇದರಲ್ಲಿ ನಬಾರ್ಡ್‌ನಿಂದ ಅಪೆಕ್ಸ್ ಬ್ಯಾಂಕ್ ಸಾಲ ಪಡೆದು

ಅಪೆಕ್ಸ್ ಬ್ಯಾಂಕ್, ಜಿಲ್ಲಾ ಬ್ಯಾಂಕಿಗೆ ಮತ್ತು ರೈತರಿಗೆ ಕೊಡುವ ಸಾಲದ ಮೇಲೆ ಸರ್ಕಾರ ಗ್ಯಾರಂಟಿ ಕೊಡುವಾಗ ಸಾಲ ತೆಗೆದುಕೊಳ್ಳುವವರು ಒಂದು ಪರ್ಸೆಂಟನ್ನು ಸರ್ಕಾರಕ್ಕೆ ಕಮಿಷನ್ ಕೊಡಬೇಕಾಗಿತ್ತು. ಇದನ್ನು ಬಿಡುತ್ತೇನೆ ಅಂದಿದ್ದಾರೆ ಮುಖ್ಯಮಂತ್ರಿಗಳು ಅದರ ಜೊತೆಗೆ ರೈತರಿಗೆ ಬಡ್ಡಿದರ ಕಡಿಮೆ ಮಾಡುವುದಕ್ಕೆ ಹಣಕಾಸಿನ ಬ್ಯಾಂಕ್‌ಗಳಾದ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಬ್ಯಾಂಕ್ ಕೃಷಿಬ್ಯಾಂಕ್‌ಗಳಿಗೆ ಕರಾರನ್ನು ಹಾಕಿದ್ದಾರೆ. ನೀವು ಒಂದು ಪರ್ಸೆಂಟ್ ಬಡ್ಡಿ ಕಡಿಮೆ ಮಾಡಬೇಕು, ನಾವು ಒಂದು ಪರ್ಸೆಂಟ್ ರೈತರಿಂದ ಕಮಿಷನ್ ತೆಗೆದುಕೊಳ್ಳುವುದನ್ನು ನಿಲ್ಲಿಸುತ್ತೇವೆ ಅಂತ. ಇದರಿಂದ ರೈತರಿಗೆ ಲಾಭ ಆಗುವಂಥಾದ್ದು. ಇನ್ನು ಶೇಕಡ 9ರ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸಿಕ್ಕಬೇಕೆಂಬುದು ಮಾನ್ಯ ಮುಖ್ಯಮಂತ್ರಿಗಳ ಕಳಕಳಿ ಇದೆ. ಆ ದಿಸೆಯಲ್ಲಿ ಈಗಾಗಲೇ ರಾಜ್ಯ ಮಟ್ಟದಲ್ಲಿ ನಬಾರ್ಡ್ ಅಧಿಕಾರಿಗಳ ಜೊತೆಗೆ, ಆರ್.ಬಿ.ಐ ಜೊತೆಗೆ, ಅನೇಕ ಹಂತದ ಚರ್ಚೆಗಳು ನಡೆದು ಬಡ್ಡಿ ದರ ಯಾವರೀತಿ ಕಡಿಮೆ ಮಾಡಬೇಕೆಂಬುದು ಗಹನವಾಗಿ ನಡೆದಿದ್ದು, ಇದು ಮೊದಲ ಹೆಜ್ಜೆ ಎಂದು ನಾನು ಭಾವಿಸುತ್ತಿದ್ದೇನೆ. ಇವತ್ತು ಹಣಕಾಸಿನ ಸಂಸ್ಥೆಗಳಾದ ಅಪೆಕ್ಸ್, ರಿಸರ್ವ್‌ಬ್ಯಾಂಕ್, ನಬಾರ್ಡ್ ಜಿಲ್ಲಾ ಬ್ಯಾಂಕ್‌ಗಳೆಲ್ಲಾ ಸೇರಿ ಒಂದು ಪರ್ಸೆಂಟಾದರೂ ನೀವು ಬಿಡ್ರಿ ಅಂತ ಹೇಳಿ ಇವತ್ತು ಎರಡು ಪರ್ಸೆಂಟ್ ಕಡಿಮೆಯಾಗುವಂಥಾದ್ದಕ್ಕೆ ನಾನು ಸ್ವಾಗತ ಮಾಡುತ್ತೇನೆ: ಆದರೆ ಇದು ಇರತಕ್ಕದ್ದು 2001 ಏಪ್ರಿಲ್‌ನಿಂದ 2002 ಮಾರ್ಚಿವರೆಗೆ ಮಾತ್ರ ಸೀಮಿತವಾಗಿದೆ. ಮತ್ತೆ 2002 ಏಪ್ರಿಲ್‌ನಿಂದ ಪುನಃ ಕೊಡಬೇಕಾಗುತ್ತದೆ. ಅದಕ್ಕೆ ಶಾಶ್ವತವಾಗಿ ಈ ಕಮಿಷನ್ ಅನ್ನು ಬಿಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ : ಒಳ್ಳೆಯ ಸಲಹೆ ಕೊಟ್ಟಿದ್ದಾರೆ, ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಬಿ.ಆರ್.ಯಾವಗಲ್ (ನರಗುಂದ) : ಕೇಂದ್ರ ಸರ್ಕಾರವನ್ನು ನೋಡಿದ್ದೀರಿ, ಬಹಳಷ್ಟು ಕಡೆ ಸಾಲ ಬಿಡಲಿಕ್ಕೆ ಆದೇಶ ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಬಂದಿದೆ. ಅದೇ ಕ್ರಮವನ್ನು ತಾವು ಇಲ್ಲೂ ಕೈಗೊಳ್ಳುವ ಸಂದರ್ಭ ಬರಬಹುದು. ತಮಗೆ ಗೊತ್ತಿರುವಂತೆ ಇದೇನು ಸಂಚಿತ ಸಾಲ ಕೂಡಿಬಿದ್ದಿದೆ ಅದು ಅಸಲು ಸಾಲ ಸೇರಿ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದುಹೋಗಿದೆ. ಅದಕ್ಕೇನಾದರೂ ಒಂದು ರೂಪ ಕೊಡಲು ಬಹಳ ಸಮಗ್ರವಾಗಿರುವ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಏನು ಷೆಡ್ಯೂಲ್ಡ್ ಬ್ಯಾಂಕಿನವರು ಬಹುತೇಕ ರೈತರು ಯಾವ ಕರಾರಿಗೆ ಮುಂದೆ ಬರುತ್ತಾರೋ ಅಂದರೆ ಬಡ್ಡಿಯನ್ನು ಪೂರ್ತಿ ಬಿಡುತ್ತಾರೆ. ಆಮೇಲೆ ಸಾಲದ ಅಸಲನ್ನು ಮರುಪಾವತಿ ಮಾಡಬಹುದು. ಹಿಂದೆ ಸಾಲ ಸರಿಯಾಗಿ ತೀರಿಸದಿದ್ದರೆ ಹೊಸದಾಗಿ ಸಾಲ ಕೊಡುತ್ತಿರಲಿಲ್ಲ, ಈಗ ಹೊಸ ಸಾಲ ಕೊಡಲೂ ಅವರು ತಯಾರಾಗುತ್ತಿದ್ದಾರೆ. ನಮ್ಮಲ್ಲೂ ಆ ಕ್ರಮ ಬಹಳ ಆಗತ್ಯ. ಈ ಖಾತರಿ ಕಮಿಷನ್ ಮತ್ತು ಬಡ್ಡಿ ಕಡಿಮೆ ಮಾಡುವ ಕ್ರಮಕ್ಕೆ ನಮ್ಮದೂ ಬೆಂಬಲವಿದೆ. ಮಾನ್ಯ ಮುಖ್ಯ ಮಂತ್ರಿಗಳು ಅದರ ಬಗ್ಗೆ ದಯವಿಟ್ಟು...

ಶ್ರೀ ಡಿ.ಬಿ.ಚಂದ್ರೇಗೌಡ : ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್ : ಮೊನ್ನೆ ಸಹಕಾರ ಸಚಿವರ ಸಭೆ ಆಯಿತು. ಏನಾಗಿದೆ ಅಂದರೆ ಲ್ಯಾಂಟ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕಿನ ನಡುವೆ ಸಾವಿರ ಕೋಟಿ ರೂ.ಪಾಯಿಗಳ ಗ್ಯಾಪಿದೆ. ಅದಕ್ಕೆ 50 ಕೋಟಿ ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ಮಾಡಿದ್ದರೆ, ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಂಡರೆ ಕೇಂದ್ರ ಸರ್ಕಾರ ಶೇಕಡ 50ರಷ್ಟು ಕೊಡುತ್ತಾರೆ.

7.40 ಪಿಎಂ

ಇದಕ್ಕೋಸ್ಕರ ಪೂರಕ ಅಂದಾಜಿನಲ್ಲಿ ಹಣ ಇಡಬೇಕಾಗಿತ್ತು. ನಾನು ಆಗಲೇ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕಾಗಿತ್ತು. ಆದರೆ, ನೆನಪು ಬರಲಿಲ್ಲ. ಈಗಾಗಲೇ ಬೇರೆ ಬೇರೆ ರಾಜ್ಯಗಳಲ್ಲಿ ಇದಕ್ಕಾಗಿ ಪ್ರಾವಿಜನ್ ಮಾಡಿಕೊಂಡಿದ್ದಾರೆ. ದಯವಿಟ್ಟು ಇದನ್ನು ಇಲ್ಲಿಯೂ ಕೂಡ ಮಾಡಿದರೆ ಕೇಂದ್ರ ಸರ್ಕಾರದಿಂದ ನಮಗೆ ಸುಮಾರು 500 ರಿಂದ 600 ಕೋಟಿ ರೂಪಾಯಿಗಳು ಸಿಗುತ್ತದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ (ತಿಕೋಟ) : ಸನ್ಮಾನ್ಯ ಅಧ್ಯಕ್ಷರೇ, Between Primary Agricultural Co-operative Societies and Dist. Co. Operative Banks there is lot of transactions. ಪ್ರೈಮರಿ ಸೊಸೈಟಿಗಳು ಡಿಸಿಸಿ ಬ್ಯಾಂಕ್‌ಗಳಿಂದ ಏನೊಂದು ಸಾಲವನ್ನು ತೆಗೆದುಕೊಂಡಿರುತ್ತಾರೆ ಅವು ಮೆಂಬರ್ ಲೆವಲ್‌ನಲ್ಲಿ ಅಲ್ಲಿ ಒಂದು ರೀತಿಯಾದ ಗ್ಯಾಪ್ ಇರುತ್ತದೆ. ಇದಕ್ಕೋಸ್ಕರ ಕೇಂದ್ರ ಸರ್ಕಾರ ಒಂದು ಸ್ಕೀಂನ್ನು ಪ್ರಾರಂಭ ಮಾಡಿದೆ. ಇದಕ್ಕಾಗಿ ಸುಮಾರು 1000 ಕೋಟಿ ರೂಪಾಯಿಗಳ ಒಂದು ಪ್ರಾವಿಜನ್ ಮಾಡಿಕೊಂಡಿದ್ದಾರೆ. ಕೇಂದ್ರ ಸರ್ಕಾರ ಈ ಒಂದು ಸ್ಕೀಂನಲ್ಲಿ ಕೊಡತಕ್ಕಂಥ ಹಣವನ್ನು ಸ್ವಲ್ಪ ಉಪಯೋಗ ಮಾಡಿಕೊಂಡರೆ We will be most benefited. ಇದು ಉಪಯೋಗ ಆಗದೇ ಇದ್ದರೆ, ಡಿಸಿಸಿ ಬ್ಯಾಂಕ್‌ನವರಿಗೆ ಲಾಸ್ ಆಗುತ್ತದೆ. ಈ ಒಂದು ಸ್ಕೀಂನಿಂದ ನಮ್ಮ ರಾಜ್ಯಕ್ಕೆ ಸುಮಾರು 500 ಕೋಟಿ ರೂಪಾಯಿಗಳು ಸಿಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಡಿಸಿಸಿ ಬ್ಯಾಂಕ್‌ನವರು ತೆಗೆದುಕೊಂಡಿರುವುದಕ್ಕೆ ಸಂಬಂಧಪಡುತ್ತದೆಯೋ ಅಥವಾ ಪಿಎಲ್‌ಡಿ ಬ್ಯಾಂಕಿನವರಿಗೆ ಇದು ಸಂಬಂಧಪಡುತ್ತದೆಯೇ?

ಶ್ರೀ ಬಿ.ಹೆಚ್.ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಕೇಂದ್ರ ಸರ್ಕಾರ 60 ಪರ್ಸೆಂಟ್‌ನಷ್ಟು ಹಣ ಕೊಡುತ್ತದೆ. ಉಳಿದ 40 ಪರ್ಸೆಂಟ್ ಹಣವನ್ನು ರಾಜ್ಯ ಸರ್ಕಾರ ಹಾಕಿಕೊಳ್ಳಬೇಕಾಗುತ್ತದೆ. ಇವತ್ತಿನದಿವಸ ಸುಮಾರು 200 ರಿಂದ 800 ಕೋಟಿ ರೂಪಾಯಿಗಳಷ್ಟು ಸಾಲವನ್ನು ರೈತರಿಂದ ಮತ್ತು ಇತರೇ ಸಂಘಗಳಿಂದ ವಸೂಲಿ ಮಾಡಿ ಸರ್ಕಾರಕ್ಕೆ ತುಂಬಿದರೂ ಸಹ, ಅವ್ಯವಹಾರ ಆಗಿರತಕ್ಕಂಥದಕ್ಕೆ ಮತ್ತು ಮಿಸ್ ಅಪ್ರೋಪ್ರಿಯೇಷನ್ ಅಥವಾ ಸಾಲ ವಸೂಲು ಮಾಡಿ ಬಿಲ್ಡಿಂಗ್ ಕಟ್ಟಿರತಕ್ಕಂಥಾದ್ದು, ಈ ರೀತಿಯಾದ ಗ್ಯಾಪ್ ಹಣವನ್ನು ತುಂಬಲಿಕ್ಕೆ ಕೇಂದ್ರ ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ ಸದರಿ ಯೋಜನೆಯನ್ನು ಜಾರಿಗೆ ತಂದಿದೆ ಈಗಾಗಲೇ ಬೇರೆ ಬೇರೆ ರಾಜ್ಯ ಸರ್ಕಾರಗಳು ತಮ್ಮ ಪಾಲಿನ 40 ಪರ್ಸೆಂಟ್ ಹಣವನ್ನು ತುಂಬಲಿಕ್ಕೆ ಈ ವರ್ಷದ ಹಣ ಒದಗಿಸಿದ್ದಾರೆ. ಆದರೆ, ನಮ್ಮಲ್ಲಿ ಇದನ್ನು ಇನ್ನೂ ಮಾಡಿಲ್ಲ. ಇದನ್ನು ಮಾಡಿದರೆ ನಮ್ಮ ರಾಜ್ಯದ ರೈತರಿಗೆ ಮತ್ತು ಸಂಘಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಯೋಜನೆ ಮಾಡಿದರೆ ಒಳ್ಳೆಯದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ : ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ಮಾಹಿತಿ ನನ್ನ ಹತ್ತಿರ ಈಗ ಇಲ್ಲ. ಸದರಿ ಮಾಹಿತಿಯನ್ನು ನಾನು ತರಿಸಿಕೊಳ್ಳುತ್ತೇನೆ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ : ಈ ಮಾಹಿತಿಗಳನ್ನು ಈಗ ತರಿಸಿಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ಈಗಾಗಲೇ ನಬಾರ್ಡ್‌ನವರು ಅಪೆಕ್ಸ್ ಬ್ಯಾಂಕ್‌ಗಳಿಗೆ ಕಳುಹಿಸಿಕೊಟ್ಟಿರುತ್ತಾರೆ.

ಶ್ರೀ ಡಿ.ಬಿ.ಚಂದ್ರೇಗೌಡ : ಅಲ್ಲಿಗೆ ಬಂದಿದ್ದರೆ, ನಾನು ಅಲ್ಲಿಂದ ತರಿಸಿಕೊಳ್ಳುತ್ತೇನೆ. ಇದಕ್ಕಾದರೂ ಸ್ವಲ್ಪ ಸಮಯ ಬೇಕಲ್ಲವೇ? ರೈತರಿಗೆ ಸಹಾಯವಾಗತಕ್ಕಂಥ ಒಂದು ಒಳ್ಳೆಯ ಸಲಹೆಯನ್ನು ತಾವು ಹೇಳಿದ್ದೀರಿ. ಆದ್ದರಿಂದ, ಇದನ್ನು ಖಂಡಿತ ತರಿಸಿಕೊಳ್ಳುತ್ತೇನೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಈಗ 2002ನೇ ಸಾಲಿನ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ ಚರ್ಚೆ ಮುಗಿದಿದೆ. ಈಗ ಅದನ್ನು ಮತಕ್ಕೆ ಹಾಕುತ್ತೇನೆ.

ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ 2002

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

""""2002ರ ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ (ತಿದ್ದುಪಡಿ) ವಿಧೇಯಯಕವನ್ನು ಪರ್ಯಾಲೋಚಿಸಬೇಕೆಂದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು)

ಖಂಡ 2

ಅಧ್ಯಕ್ಷರು: "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

"ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಪ್ರಸ್ತಾವ ಅಂಗೀಕಾರ

ಶ್ರೀ ಬಿ.ಡಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ (ತಿದ್ದುಪಡಿ) ವಿಧೇಯಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"2002ರ ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ (ತಿದ್ದುಪಡಿ) ವಿಧೇಯಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು: ಈಗ ಬಿ.ಡಿ.ಎ.ಬಿಲ್ ತೆಗೆದುಕೊಳ್ಳುತ್ತೇನೆ.

ಶ್ರೀ. ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೇ, ನಾವು ಬೆಳಿಗ್ಗೆ 10.00 ಗಂಟೆಯಿಂದ ಇಲ್ಲಿಯೇ ಕುಳಿತುಕೊಂಡಿದ್ದೇವೆ. ನಾವೇನೂ ಹೋಗಿ ಬರುವವರಲ್ಲ. "ಹಿಟ್ ಅಂಡ್ ರನ್" ಎಂದು ಮಾನ್ಯ ಮುಖ್ಯಮಂತ್ರಿಯವರು ಒಂದು ಸಾರಿ ಮಾತನಾಡುವಂಥ ಸಂದರ್ಭದಲ್ಲಿ ಹೇಳಿದ್ದರು. ಆದರೆ, ನಾವು ಇಲ್ಲಿಯೇ ಕುಳಿತಿರುವವರು. ಆದ್ದರಿಂದ, ನಾಳೆ ಬೆಳಿಗ್ಗೆ 10.00 ಗಂಟೆಗೆ ಮತ್ತೆ ಸೇರೋಣ. ದಯವಿಟ್ಟು ಈಗ ಸದನವನ್ನು ಮುಂದೂಡಿ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆವರೆಗೆ ಮುಂದುಡುತ್ತಿದ್ದೇನೆ.

(ಸದನವು ಸಂಜೆ 7 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 7ನೇ ಆಗಸ್ಟ್ ಮಾಹೆ 2002ರ ಬುಧವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು.)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಅನುಬಂಧ 1

5. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ಮುಲ್ಕಿ ನಗರ ಪಂಚಾಯತ್‌ಗೆ ಮಂಗಳೂರಿನಿಂದ ಕುಡಿಯುವ ನೀರು ಸರಬರಾಜು

11(55) ಶ್ರೀ.ಕೆ.ಅಭಯಚಂದ್ರ (ಮೂಡಬಿದ್ರೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮುಲ್ಕಿ ನಗರ ಪಂಚಾಯತ್‌ಗೆ ಮಂಗಳೂರಿನಿಂದ ಕುಡಿಯುವ ನೀರು ಸರಬರಾಜು ಕಾಮಗಾರಿ ಯಾವ ಹಂತದಲ್ಲಿದೆ?
2. ಯಾವಾಗ ಸಂಪೂರ್ಣ ಆಗಬಹುದು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು)

1. ಮುಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದಲ್ಲಿ ಬರುವ 6 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಒದಗಿಸುವ ಯೋಜನೆಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡದ್ದು, ಸದರಿ ಕಾಮಗಾರಿಯನ್ನು ಕೈಗೆತಿಕೊಳ್ಳುವ ಸಲುವಾಗಿ ಟೆಂಡರ್ ಕರೆಯಲು ಕ್ರಮ ತೆಗೆದು ಕೊಳ್ಳಲಾಗುತ್ತದೆ.
2. ಎರಡು ವರ್ಷಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಬೆಂಗಳೂರಿನ ವಸತಿವಲಯಗಳಲ್ಲಿ ಕಲ್ಯಾಣ ಮಂಟಪಗಳ ನಿರ್ಮಾಣ

13 (61) ಶ್ರೀ ಎಸ್.ಸುರೇಶ್‌ಕುಮಾರ್(ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?